ಇ) ಮಲ್ಪೆಯಲ್ಲಿ ಒಂದು ಜಟ್ಟಿಯನ್ನು ನಿರ್ಮಾಣ ಮಾಡುವ ಯೋಜನೆ ಇದ್ದು ಇದರ ಬಗ್ಗೆ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಬೋಟ್ ಇಂಜಿನಿಯರಿಂಗ್ ಫಾರ್ ಫಿಶರೀಸ್, ಭಾರತ ಸರ್ಕಾರ, ಬೆಂಗಳೂರು ಇವರಿಂದ ತಾಂತ್ರಿಕ ಸಲಹೆಯನ್ನು ಕೇಳಲಾಗಿದೆ. ಅವರ ಸಲಹೆ ಬಂದನಂತರ, ಜಟ್ಟಿ ನಿರ್ಮಾಣ ಮತ್ತು ಹೂಳೆತ್ತುವ ಬಗ್ಗೆ ಪರಿಶೀಲಿಸಿ, ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಪುತ್ತೂರಿನ ತಾಲ್ಲೂಕಿನ ಕಡಬ ಸರ್ಕಾರಿ ಪ್ರೌಢಶಾಲೆಯನ್ನು ಪದವಿ ಪೂರ್ವ ಕಾಲೇಜನ್ನಾಗಿ ಪರಿವರ್ತಿಸುವುದು.

೩೧೦ ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಶಿಕ್ಷಣ ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮಂತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪುತ್ತೂರು ತಾಲ್ಲೂಕಿನ ಕಡಬ ಸರಕಾರಿ ಪ್ರೌಢಶಾಲೆಯನ್ನು ಪದವಿ ಪೂರ್ವ ಕಾಲೇಜನ್ನಾಗಿ ಪರಿವರ್ತಿಸಬೇಕೆಂಬುದು ಸರಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಈ ಪ್ರೌಢ ಶಾಲೆಯನ್ನು ಪದವಿ ಪೂರ್ವ ಕಾಲೇಜನ್ನಾಗಿ ಪರಿವರ್ತಿಸಲಾಗುವುದೇ

ಇ) ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು)—

ಅ) ಇಲಾಖೆಯ ಗಮನಕ್ಕೆ ಬಂದಿದೆ.

ಆ) ಪ್ರಸ್ತಾವನೆ ಸರ್ಕಾರಕ್ಕೆ ಬಂದ ಮೇಲೇ ಪರಿಶೀಲಿಸಲಾಗುವುದು.

ಇ) ಪ್ರಶ್ನೆಯು ಉದ್ಭವಿಸುವುದಿಲ್ಲ.

ಮಂಗಳೂರಿನ ವಿದ್ಯುತ್ ಚಿತಾಗಾರ ಕಾರ್ಯಾರಂಭ ಮಾಡದಿರುವ ಬಗ್ಗೆ

೧೨೫. ಶ್ರೀ ವಿಜಯಕುಮಾರ್ ಶೆಟ್ಟಿ, (ಸುರತ್ಕಲ್).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಮಂಗಳೂರು ನಗರದಲ್ಲಿ ವಿದ್ಯುತ್ ಚಿತಾಗಾರ ಸಂಪೂರ್ಣಗೊಂಡಿದ್ದರೂ ಕಾರ್ಯಾರಂಭ ಮಾಡದೇ ಇರಲು ಕಾರಣಗಳೇನು ?

೨) ವಿದ್ಯುತ್ ಚಿತಾಗಾರಕ್ಕೆ ಸರಕಾರವು ಖರ್ಚು ಮಾಡಿರುವ ಹಣವೆಷ್ಟು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು),—

೧) ಮಂಗಳೂರು ಮಹಾನಗರಪಾಲಿಕೆಯ ವಿದ್ಯುತ್ ಚಿತಾಗಾರದ ಕಾಮಗಾರಿ ಮತ್ತು ವಿದ್ಯುತ್ ಕೆಲಸ ಸಂಪೂರ್ಣಗೊಂಡಿದೆ. ವಿದ್ಯುತ್ ಚಿತಾಗಾರದ "ಸ್ಲೈಡಿಂಗ್ ಮೆಕ್ಯಾನಿಸಂ" ಅಳವಡಿಕೆ ಕೆಲಸ ತಡವಾಗಿರುವುದರಿಂದ, ವಿದ್ಯುತ್ ಚಿತಾಗಾರವನ್ನು ಪ್ರಾರಂಭಿಸುವ ಕೆಲಸ ವಿಳಂಬವಾಗಿದೆ. ಕೆಲಸದ ಗುತ್ತಿಗೆದಾರರನ್ನು ಬರೋಡಾದಿಂದ ಕರೆಸಲು ಪ್ರಯತ್ನಿಸಲಾಗುತ್ತಿದೆ.

೨) ಮಂಗಳೂರು ನಗರಪಾಲಿಕೆಯು ಇಲ್ಲಿಯವರೆಗೆ ಯಂತ್ರೋಪಕರಣಗಳಿಗಾಗಿ ರೂ. ೬.೦೦ ಲಕ್ಷಗಳು ಮತ್ತು ಕಾಮಗಾರಿ ಕೆಲಸಕ್ಕಾಗಿ ರೂ. ೭.೦೦ ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಬೀಜನಿಗಮದಿಂದ ಕಳಪೆ ಬೀಜಗಳ ವಿತರಣೆ

೧೨೭ ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕೃಷಿಕಾಯ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈ ವರ್ಷ ಕರ್ನಾಟಕ ಬೀಜ ನಿಗಮದಿಂದ ರೈತರಿಗೆ ಹಂಚಲಾಗಿರುವ ಹತ್ತಿ-ಬೀಜ ಕಳಪೆ ದರ್ಜೆಯದ್ದಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?